(b) steps taken by the Government to avoid the accidents ?

SRI. M M. J. SADYOJATHA (Minister for Transport and Minor Irrigation).—

1980		1981 (Upto 30-11-1981)	
National Highways	State Highways	National Highways	State Highways
2,960	2,528	2,251	1,656

The following steps have been taken ;

(a) Vehicles are intensively and regularly checked by both the Police and Motor Vehicles Departments authorities to prevent over-speeding and overloading.

(b) Accident spots have been identified and caution boards have been installed.

(c) Roads have been widened wherever necessary.

(d) More attention has been given towards proper maintenance of roads

(e) Conduct of speed trials.

(f) People are being educated on traffic rules.

ಶ್ರೀ ಕೆ. ಪ್ರಭಾಕರ್ ತೇಲ್ಕರ್.—೧೯೮೦ ರಲ್ಲಿ ನ್ಯಾಷನಲ್ ಹೈವೇಸ್ ಮತ್ತು ಸ್ಟೇಟ್ ಹೈವೇಸ್ ನಲ್ಲಿ ಅಪಘಾತಗಳು ಆಗಿದ್ದು ಸುಮಾರು ೫ಸಾವಿರ ಜನರು ಸತ್ತಿದ್ದಾರೆ. ಈ ಸಂಖ್ಯೆಯನ್ನು ನೋಡಿದರೆ ಒಂದು ದಿವಸಕ್ಕೆ ಇಬ್ಬರಂತೆ ಜನ ಸಾಯುತ್ತಿದ್ದಾರೆ ನೀವು ಆ ಜನರಿಗೆ ಏನಾದರೂ ಪ್ರೊಟೆಕ್ಷನ್ ಕೊಡುತ್ತೀರಾ? ಅಥವಾ ಇದೇರೀತಿ ಸಾಯಿಸುತ್ತಾ ಹೋಗುತ್ತೀರಾ?

ಶ್ರೀ ಕೆ. ಯಿಂಕಟಪ್ಪ (ಮಾನ್ಯ ಸಾರಿಗೆ ಹಾಗೂ ಸಣ್ಣ ನೀರಾವರಿ ಸಚಿವರ ಪರವಾಗಿ).—ಈ ಬಗ್ಗೆ ಏನೇನು ಮಾಡುತ್ತಿದ್ದೇವೆ, ಮತ್ತು ಮಾಡಬಹುದು ಎಂಬುದನ್ನು ಉತ್ತರದಲ್ಲೇ ಹೇಳಿದ್ದೇವೆ. ಈ ಅಪಘಾತಗಳು ನೀರಾವರಿ ರಸ್ತೆಗಳಲ್ಲೇ ಸಂಭವಿಸುತ್ತಿವೆಯೆ? ತಿರುವುಗಳು ಇರತಕ್ಕ ಕಡೆಗಳಲ್ಲಿ ಸಂಭವಿಸುತ್ತಿವೆಯೆ? ನಗರಗಳಲ್ಲಿ ಹೋಗತಕ್ಕ ಸಂದರ್ಭದಲ್ಲಿ ಆಗುತ್ತಿವೆಯೆ? ವಾಹನ ಚಾಲಕರು ಏನು ಮಾಡಬಹುದು ಎಂಬುದನ್ನೆಲ್ಲಾ ರೆಕಾರ್ಡ್ ಮಾಡಲು ಮೈಸೂರು ಹಾಗೂ ಬೆಂಗಳೂರು, ಬೆಂಗಳೂರು ಮತ್ತು ತುಮಕೂರು ಇವುಗಳ ಮಧ್ಯೆ ಚೆಕ್ ಮಾಡತಕ್ಕ ವ್ಯವಸ್ಥೆಯನ್ನೂ ಮಾಡಿದ್ದೇವೆ.

ಶ್ರೀ ಪ್ರಭಾಕರ ತೇಲ್ಕರ್.—ನ್ಯಾಷನಲ್ ಹೈವೇನಲ್ಲಿ ಪ್ರತಿದಿವಸ ಅಪಘಾತಗಳು ಇನ್ನೂ ಏರುತ್ತಲೇ ಇವೆ. ತಿರುವು ರಸ್ತೆಗಳು ಬಹಳ ಇದ್ದು ಅವುಗಳನ್ನು ಬಹಳ ಮಟ್ಟಿಗೆ ರಿಪೇರಿ ಮಾಡುತ್ತಿದ್ದರೂ ಇದು ತಪ್ಪಿಲ್ಲ. ಒಂದು ವರ್ಷದಲ್ಲಿ ಸುಮಾರು ೩ ಸಾವಿರ ಜನರು ಸತ್ತಿದ್ದಾರೆ ಇದಕ್ಕೆ ಮುಖ್ಯ ಕಾರಣ ಬಹಳ ರಸ್ತೆಗಳು ಚಿಕ್ಕವಾಗಿವೆ ಅಂಥ ಸ್ಟೇಟ್ ಹೈವೇಗಳನ್ನು ಸ್ವಲ್ಪ ದೊಡ್ಡದು ಮಾಡುವುದಕ್ಕೆ ಸರ್ಕಾರದವರು ಕ್ರಮ ಕೈಗೊಳ್ಳಬಹುದಲ್ಲವೇ? ಹಿರಿಯೂರು ಮತ್ತು ಹುಮ್ನಾಬಾದ್ ಮಧ್ಯೆ ನ್ಯಾಷನಲ್ ಹೈವೇ ಮಾಡಬೇಕು. ಏಕೆಂದರೆ ಈ ರಸ್ತೆಯಲ್ಲಿ ಅಪಘಾತಗಳು ಬಹಳ ಜಾಸ್ತಿಯಾಗುತ್ತಿವೆ ಆದ್ದರಿಂದ ಈ ರಸ್ತೆಯನ್ನು ಅಗಲ ಮಾಡುವ ಕೆಲಸ ಮಾಡಿಸುತ್ತೀರಾ?

ಶ್ರೀ ಕೆ ಯೆಂಕಟಪ್ಪ.—ಮಾನ್ಯ ಸದಸ್ಯರು ಎಲ್ಲಾ ರಸ್ತೆಗಳಲ್ಲೂ ಓಡಾಡಿದ್ದಾರೆ. ಎಲ್ಲೆಲ್ಲಿ ಸಾಧ್ಯವೋ ಅಂಥ ಕಡೆಗಳಲ್ಲಿ ನ್ಯಾಷನಲ್ ಹೈವೇ ಮತ್ತು ಸ್ಟೇಟ್ ಹೈವೇಗಳನ್ನು ಅಗಲಮಾಡಿದ್ದೇವೆ ಕೆಲವುಕಡೆ ಅಗಲ ಮಾಡುವುದಕ್ಕೆ ಏನು ತೊಂದರೆಯಾಗಿದೆ ಎಂದರೆ ರಸ್ತೆಗಳ ಪಕ್ಕದಲ್ಲಿ ಸಾಲುಮರಗಳು ಸಾಕಷ್ಟು ದೊಡ್ಡದಾಗಿ ಬೆಳೆದಿವೆ. ನಮ್ಮ ಲೋಕೋಪಯೋಗಿ ಸಚಿವರು ಒಂದುಸಾರಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಬೆಂಗಳೂರಿನಿಂದ ತುಮಕೂರಿನವರೆಗೆ ಜೋಡಿ ರಸ್ತೆಗಳನ್ನು ಮಾಡುವ ಕಾರ್ಯ ನಡೆದಿದೆ. ಈಗ ಹೊಸದಾಗಿ ಮಾಡುತ್ತಿರುವ ರಸ್ತೆಗಳನ್ನೆಲ್ಲಾ ಸಾಕಷ್ಟು ಅಗಲವಾಗಿಯೇ ಮಾಡುತ್ತಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ತಮ್ಮ ಉತ್ತರದಲ್ಲಿ ಸತ್ತವರ ಸಂಖ್ಯೆ ಎಷ್ಟು ಎಂಬುದನ್ನು ಹೇಳಿದ್ದೀರಿ. ಆದರೆ ನಾನು ಕೇಳುತ್ತಿರುವುದು ಮುಖ್ಯವಾಗಿ ಎರಡು ವಿಚಾರ. ನಡೆದ ಅಪಘಾತಗಳ ಸಂಖ್ಯೆ ಎಷ್ಟು? ಮತ್ತು ಅಪಘಾತದ ನಂತರ ಪರೀಕ್ಷೆಗೆ ಒಳಪಟ್ಟ ವಾಹನಗಳಲ್ಲಿ ಏನೇನು ನ್ಯೂನತೆಗಳು ಇದ್ದುವು ಎಂಬ ಬಗ್ಗೆ ವಿವರಗಳನ್ನು ಕೊಡುವುದಕ್ಕೆ ಸಾಧ್ಯವೆ?

ಶ್ರೀ ಕೆ. ಯೆಂಕಟಪ್ಪ.—೧೯೮೦ ರಲ್ಲಿ ಅಪಘಾತಗಳಾಗಿರುವುದು ೧೧,೬೭೧ ಅದರಲ್ಲಿ ಸತ್ತವರು ೧೯೮೭ ಜನ; ಗಾಯಗೊಂಡವರು ೧೧,೩೦೬ ಆದೇರೀತಿ ೧೯೮೧ ರಲ್ಲಿ ಅಪಘಾತಗಳು ಆಗಿರುವುದು ೧೪ ಸಾವಿರ ಚಿಲ್ಲರೆ, ಅದರಲ್ಲಿ ಸತ್ತವರು ೨೦೪೭ ಜನ ಗಾಯಗೊಂಡವರು ೧೩,೩೦೬ ಜನರು.

ಶ್ರೀ ಎ ಲಕ್ಷ್ಮೀಸಾಗರ್.—ಅಪಘಾತಕ್ಕೊಳಪಟ್ಟ ವಾಹನಗಳಲ್ಲಿ ಕಂಡುಬಂದ ದೋಷಗಳ ಬಗ್ಗೆ ನಿಮ್ಮಲ್ಲಿ ಮಾಹಿತಿ ಇದೆಯೆ? ತಾವು ರಸ್ತೆ ಅಗಲ ಮಾಡಬೇಕೆಂದು ಉತ್ತರದಲ್ಲಿ ಏನು ಹೇಳಿದ್ದೀರಿ ಅದು ನನಗೆ ಬೇಕಾಗಿಲ್ಲ. ಅಪಘಾತ ನಡೆದಮೇಲೆ ವಾಹನಗಳನ್ನು ಪರೀಕ್ಷೆ ಮಾಡುವುದಕ್ಕೆ ಇನ್‌ಸ್ಪೆಕ್ಟರ್‌ಗಳು ಇದ್ದಾರೆ ಕಾನೂನು ಪ್ರಕಾರ ಅವರಿಂದ ಕಡ್ಡಾಯವಾಗಿ ವರದಿಗಳನ್ನು ತರಿಸಿಕೊಳ್ಳುತ್ತೀರಾ? ಅವರ ವರದಿಯ ಪ್ರಕಾರ ಆ ವಾಹನಗಳಲ್ಲಿ ಕಂಡುಬಂದ ದೋಷಗಳು ಏನು ಮತ್ತು ಕಾರಣಗಳು ಏನು? ಇದರ ಬಗ್ಗೆ ವಿವರ ಕೊಡಬೇಕು. ಮತ್ತು ಅವುಗಳನ್ನು ಸರಿಪಡಿಸುವುದಕ್ಕೆ ಸಾರಿಗೆ ಸಂಸ್ಥೆಯವರು ಏನು ಕ್ರಮ ಕೈಗೊಂಡಿದ್ದಾರೆ. A large percentage of vehicles plied by KSRTC are over-aged. Is it one of the reasons for the largescale accidents which have taken such a high toll of persons?

ಶ್ರೀ ಕೆ. ಯೆಂಕಟಪ್ಪ.—ಮಾನ್ಯ ಅಧ್ಯಕ್ಷರೆ ಅಪಘಾತಗಳು ಆಗಾಗ್ಗೆ ಆಗುವುದರ ಬಗ್ಗೆ ಕಾರಣಗಳನ್ನು ಈಗಾಗಲೇ ಹೇಳಿದ್ದೇನೆ. ಕೆಲವು ಸಂದರ್ಭಗಳಲ್ಲಿ ವಾಹನಗಳನ್ನು ಓಡಿಸತಕ್ಕಂಥ ಡ್ರೈವರ್‌ಗಳೂ ಇದಕ್ಕೆ ಕಾರಣಕರ್ತರಾಗುತ್ತಾರೆ, ಬಹಳ ವೇಗದಿಂದ ವಾಹನಗಳನ್ನು ಓಡಿಸುವುದರಿಂದ ಅಪಘಾತಗಳು ಆಗುವುದಕ್ಕೆ ಕಾರಣವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಡ್ರೈವರ್‌ಗಳು ಕ್ಲೀನರ್‌ಕೈಯಲ್ಲಿ ವಾಹನಗಳನ್ನು ಕೊಟ್ಟು ಡ್ರೈವ್ ಮಾಡಿಸುವುದರಿಂದಲೂ ವಾಹನಗಳು ಅಪಘಾತಕ್ಕೆ ಈಡಾಗತಕ್ಕಂಥ ಸಂದರ್ಭ ಏರುತ್ತದೆ. ಮತ್ತು ಬ್ರೇಕ್ ಫೇಲ್ಯೂರ್ ಆಗುವುದರಿಂದಲೂ ಅಪಘಾತ ಸಂಬವಿಸುತ್ತದೆಂದು ಹೇಳಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಉತ್ತರವನ್ನು ಕೊಡುತ್ತಿರುವುದು ಸಾಮಾನ್ಯವಾದ ಉತ್ತರ ವಾಗಿರುತ್ತದೆ. ಹಾಗಾಗಬಹುದು, ಹೀಗಾಗಬಹುದು ಎಂದರೆ After every accident the Vehicle is inspected by Vehicle Inspector of the concerned area. According to his report what are the major reasons he has elicited in his report about the working of the vehicles? ವಾಹನಗಳಲ್ಲಿ ದೋಷವೇನಾದರೂ ಇದ್ದ ಅಪಘಾತವಾಗಿದ್ದರೆ ಅದರ ವಿವರ ಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಕೆ. ಯೆಂಕಟಪ್ಪ.—ಈಗಾಗಲೇ ಹೇಳಿದ್ದೇನೆ. ಡ್ರೈವರ್‌ಗಳು ಕುಡಿದು ವಾಹನವನ್ನು ಓಡಿಸುವುದರಿಂದ ಆಗುವುದರ ಜೊತೆಗೆ, ಮೆಕ್ಯಾನಿಕಲ್ ಆಗಿ ಸರ್ವೇ ಸಾಮಾನ್ಯವಾಗಿ ಯಾವ ಸಂದರ್ಭದಲ್ಲಿ ಅಪಘಾತ ಆಗುತ್ತದೆ ಎಂದು ಹೇಳಲಿಕ್ಕೆ ಬರುವುದಿಲ್ಲ. ಬ್ರೇಕ್ ಫೇಲ್ಯೂರ್ ಆಗಬಹುದು, ಟೈರ್ ಇದ್ದಕ್ಕಿದ್ದಹಾಗೆ ಬರ್‌ಸ್ಟ್ ಆಗುವುದರಿಂದ ಅಪಘಾತವಾಗಬಹುದು; ಮತ್ತೆ ರಸ್ತೆಗಳಲ್ಲಿ ತಗ್ಗುದಿಣ್ಣೆ ಇರುವುದರಿಂದಲೂ ಅಪಘಾತವಾಗುವುದಕ್ಕೆ ಸಾಧ್ಯತೆ ಇರುತ್ತದೆ.

ಅಧ್ಯಕ್ಷರು.—ಮೆಕಾನಿಕಲ್ ಡಿಫೆಕ್ಟ್ಸ್‌ನಿಂದ ಆಕ್ಸಿಡೆಂಟ್ಸ್ ಆಗಿರತಕ್ಕಂಥದ್ದಕ್ಕೆ ವಿವರಗಳು ಇದೆಯೇ ಎಂದು ಕೇಳುತ್ತಿದ್ದಾರೆ. ಅದಕ್ಕೆ ವಿವರಗಳು ಇದ್ದರೆ ಕೊಡಿ.

ಶ್ರೀ ಕೆ. ಯೆಂಕಟಪ್ಪ.—ಅದಕ್ಕೆ ನಮ್ಮಲ್ಲಿ ವಿವರವಿಲ್ಲ.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಮೈಸೂರು ಬೆಂಗಳೂರು ರಸ್ತೆಯಲ್ಲಿ ಗಂಟೆ ಗಂಟೆಗೂ ಒಂದೊಂದು ಆಕ್ಸಿಡೆಂಟ್ ಆಗುತ್ತಲೇ ಇರುತ್ತದೆ. ಇದಕ್ಕೆ ರಸ್ತೆಗಳು ಅಗಲವಾಗಿಲ್ಲದಿರುವುದೇ ಕಾರಣವಾಗಿರುವುದಲ್ಲದೆ ರಸ್ತೆಗಳು ನೇರವಾಗಿಲ್ಲ ನೇರಮಾಡತಕ್ಕಂಥ ಕೆಲಸ ಮಾಡಿಲ್ಲ. ಇದು ರಾಷ್ಟ್ರೀಯ ಹೆದ್ದಾರಿಯಾಗಿರುತ್ತದೆ. ರಾಷ್ಟ್ರೀಯ ಹೆದ್ದಾರಿಯಾಗಿರುವುದರಿಂದ ಆಗತಕ್ಕಂಥ ಆಕ್ಸಿಡೆಂಟನ್ನು ತಪ್ಪಿಸುವುದಕ್ಕೆ ರಸ್ತೆಗಳನ್ನು ನೇರಮಾಡತಕ್ಕಂಥ ಯೋಚನೆಯನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಕೆ. ಯೆಂಕಟಪ್ಪ.—ತಮ್ಮ ಸಲಹೆಯನ್ನು ಸರ್ಕಾರಕ್ಕೆ ಸೂಚಿಸುತ್ತೇನೆ.

ಶ್ರೀ ಪುಪಾಪತಿ.—ರಾಷ್ಟ್ರೀಯ ಹೆದ್ದಾರಿ ನಾಲ್ಕರಲ್ಲಿ ವಾಹನ ಸಂಚಾರ ಜಾಸ್ತಿಯಾಗಿರುವುದರಿಂದ ಅಪಘಾತಗಳೂ ಕೂಡ ಜಾಸ್ತಿಯಾಗುತ್ತಿರುತ್ತವೆ. ಅಪಘಾತವಾಗಲು ಮುಖ್ಯವಾದ ಕಾರಣಗಳೆಂದರೆ ರಸ್ತೆ ಪಕ್ಕದಲ್ಲಿ ಹೋಟೆಲ್‌ಗಳು ಇರುವುದರಿಂದ ಇದು ಒಂದು ಕಾರಣವಾಗಿರುತ್ತದೆ. ರಸ್ತೆಗಳ ಪಕ್ಕದಲ್ಲಿಯೇ ವಾಹನಗಳನ್ನು ನಿಲ್ಲಿಸುವುದರಿಂದ, ವಾಹನಗಳ ಅಪಘಾತಕ್ಕೆ ಕಾರಣವಾಗುತ್ತದೆ. ಇದಲ್ಲದೆ ರಸ್ತೆಗಳ ಪಕ್ಕದಲ್ಲಿಯೇ ಮಧ್ಯದ ಅಂಗಡಿಗಳಿದ್ದು ವಾಹನಚಾಲಕರು ಸಾರಾಯಿಯನ್ನು ಕುಡಿದು ಡ್ರೈವ್ ಮಾಡುವುದರಿಂದ ಅಪಘಾತಗಳು ಆಗುವುದಕ್ಕೆ ಕಾರಣವಾಗಿರುತ್ತದೆ. ಆದ್ದರಿಂದ ಇವುಗಳನ್ನು ತಪ್ಪಿಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ. ಯೆಂಕಟಪ್ಪ.—ಅಧ್ಯಕ್ಷರೇ ಅದಕ್ಕೋಸ್ಕರವಾಗಿಯೇ ಪೋಲೀಸ್ ಸಿಬ್ಬಂದಿಯನ್ನು ನೇಮಿಸಿರುತ್ತೇವೆ. ಬೆಂಗಳೂರು–ಮೈಸೂರು, ಬೆಂಗಳೂರು–ತುಮಕೂರು ರಸ್ತೆಗಳಲ್ಲಿ ಇಂಥ ದುರ್ಘಟನೆಗಳನ್ನು ತಡೆಗಟ್ಟುವುದಕ್ಕೋಸ್ಕರವಾಗಿ ವ್ಯವಸ್ಥೆಯನ್ನು ಮಾಡಿರುತ್ತಾರೆ. ಪ್ಯಾಸೆಂಜರ್ಸ್ ಸಹ ಕುಡಿಯತಕ್ಕಂಥದ್ದನ್ನು ತಪ್ಪಿಸುವ ಸಲುವಾಗಿ ಸರ್ಕಾರದವರು ಆಜ್ಞೆಯನ್ನು ಹೊರಡಿಸಿ ಪೋಲೀಸ್ ತನಿಖಾಧಿಕಾರಿಗಳನ್ನು ನೇಮಿಸಿರುತ್ತಾರೆ.

ಶ್ರೀ ಪುಂಪಾಪತಿ.—ಆಜ್ಞೆ ಮಾಡಿದರೂ ಕೂಡ ಕಾರ್ಯಗತವಾಗಿಲ್ಲ. ಈಗಲೂ ಅದೇರೀತಿ ನಡೆಯುತ್ತಿದೆ. ಮಳೆಗಾಲ ಬಂದರೆ ಒಂದೊಂದು ಗಂಟೆಯಕಾಲ ವಾಹನಗಳನ್ನು ರಸ್ತೆಗಳ ಪಕ್ಕದಲ್ಲಿಯೇ ನಿಲ್ಲಿಸಿಬಿಡುತ್ತಾರೆ.

ಶ್ರೀ ಕೆ. ಯೆಂಕಟಪ್ಪ.—ಇದನ್ನೆಲ್ಲ ತಡೆಗಟ್ಟುವ ಸಲುವಾಗಿಯೇ ಪೋಲೀಸ್ ಸಿಬ್ಬಂದಿಯನ್ನು ಸರ್ಕಾರದವರು ನೇಮಕಮಾಡಿರುತ್ತಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಹಿಂದೆ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ರಾತ್ರಿ ೧೦ ಗಂಟೆಯಾದಮೇಲೆ ವಾಹನಗಳ ಸಂಚಾರವನ್ನು ನಿಲ್ಲಿಸಬೇಕು, ಓವರ್‌ಲೋಡಿಂಗ್ ಕೂಡ ಹಾಕಬಾರದು, ಓವರ್‌ಲೋಡಿಂಗ್ ಬಗ್ಗೆ ಕ್ರಮತೆಗೆದುಕೊಳ್ಳಲಾಗುತ್ತದೆಂದು ಇನ್ನೂ ಅನೇಕ ವಿಚಾರಗಳನ್ನು ಒಳಗೊಂಡಂತೆ ಆಜ್ಞೆಯನ್ನು ಹೊರಡಿಸಿರುತ್ತಾರೆ, ಆದರೆ ಆಜ್ಞೆ ಜಾರಿಯಲ್ಲಿ ಬರಲಿಲ್ಲ. ಸ್ಪೀಡ್ ಓಡಿಸತಕ್ಕಂಥದ್ದು, ಓವರ್ ಲೋಡ್ ಮಾಡತಕ್ಕಂಥದ್ದು ರಾಷ್ಟ್ರೀಯ ಹೆದ್ದಾರಿಯಲ್ಲಿ ಸರ್ಕಾರಿ ಆಜ್ಞೆ ವಿರುದ್ಧವಾಗಿ ನಡೆಯುತ್ತಲೇ ಇದೆ. ಇದರಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ. ಆಜ್ಞೆಯನ್ನು ಜಾರಿಗೆತರತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೀರಾ? ಹುಬ್ಬಳ್ಳಿಯಿಂದ ಧಾರವಾಡ ನ್ಯಾಷನಲ್ ಪೈವೆನ್ಲಿ ಬೈಪಾಸ್ ರೋಡ್ ಮಾಡಲು ನಿರ್ಧಾರಮಾಡಿ ಕೇಂದ್ರ ಸರ್ಕಾರದಿಂದ ಹಣ ಕೂಡ ಮಂಜೂರಾಗಿ ಆರ್ಡರ್ ಪೆಂಡಿಂಗ್ ಇರುತ್ತದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಕೆ. ಯೆಂಕಟಪ್ಪ.- ಅಧ್ಯಕ್ಷರೇ ಮೊದಲನೆಯದಾಗಿ, ಶ್ರೀಮಾನ್ ಬೊಮ್ಮಾಯಿ ರವರು ಹೇಳಿದಹಾಗೆ ಲೋಡಿಂಗ್ ಬಗ್ಗೆ, ಓವರ್ ಸ್ಪೀಡ್ ಬಗ್ಗೆ ಕಾನೂನು ಪ್ರಕಾರ ೧೯೮೦ ರಲ್ಲಿ ಓವರ್ ಸ್ಪೀಡಿಂಗ್ ಬಗ್ಗೆ ೧೯,೭೮೮ ಕೇಸ್‌ಗಳನ್ನು, ಓವರ್ ಲೋಡಿಂಗ್ ಬಗ್ಗೆ ಪ್ರೈವೇಟ್ ಮತ್ತು ಗೌವರ್ನ್‌ಮೆಂಟ್ ೬,೭೪೭ ಇದರಲ್ಲಿ ಸರ್ಕಾರದ್ದು ೩೮೯ ಕೇಸ್‌ಗಳು, ಮತ್ತೆ ೧೯೮೧ ರಲ್ಲಿ ೨೧,೪೪೧ ೪,೯೭೫ ಈ ರೀತಿ ಕೇಸ್ ಹಾಕಿ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ತಾವು ಹೇಳಿದಹಾಗೆ ಧಾರವಾಡ–ಹುಬ್ಬಳ್ಳಿ ಬೈಪಾಸ್ ರೋಡ್ ಬಗ್ಗೆಯೂ ಸರ್ಕಾರದ ಮಂಜೂರಾತಿ ಹೊರಡಿಸುವವರಿದ್ದಾರೆ.

ಶ್ರೀ ಎಂ.ಎಸ್. ಆತ್ಮಾನಂದ್.—ಮಾನ್ಯ ಸಚಿವರು ಉತ್ತರ ಕೊಡುತ್ತಾ ಹೆಚ್ಚಿನ ವೇಗ, ಹೆಚ್ಚಿನ ಹೊರೆ ತಡಗಟ್ಟುವುದಕ್ಕಾಗಿ ಪೋಲೀಸ್ ಮತ್ತು ಸಾರಿಗೆ ಇಲಾಖೆಯವರು ಕಾಲಕಾಲಕ್ಕೆ ಪರೀಕ್ಷೆ ಮಾಡುತ್ತಾರೆಂದು ಹೇಳಿದ್ದಾರೆ. ಪರೀಕ್ಷೆ ಮಾಡಲಿಕ್ಕೆ ಏನು ಕ್ರಮ ಅನುಸರಿಸುತ್ತಾರೆಂದು ಕೇಳುತ್ತೇನೆ? ವಾಹನಗಳ ತನಿಖೆಯನ್ನು ಪೋಲೀಸ್ ಇಲಾಖೆಯವರು ಮಾತ್ರವೇ ಮಾಡುತ್ತಾರೆಯೇ, ಅಥವಾ ಕಾಲ ಕಾಲಕ್ಕೆ ವಾಹನ ಇಲಾಖೆಯವರೂ ಪರೀಕ್ಷೆ ಮಾಡುತ್ತಾರೆಯೇ ಎಂಬುದನ್ನು ತಿಳಿಸಬೇಕು. ಮತ್ತು ಇದರ ಬಗ್ಗೆ ಯಾವ ಒಂದು ಕ್ರಮವನ್ನು ಅನುಸರಿಸುತ್ತಾರೆ ಅದನ್ನೂ ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಯೆಂಕಟಪ್ಪ.—ಪರೀಕ್ಷಾಕ್ರಮವನ್ನು ಅನುಸರಿಸತಕ್ಕಂಥದ್ದು, ಯಾವ ರೀತಿ ಎನ್ನುವುದನ್ನು ಬೇಕಿದ್ದರೆ ಒದಗಿಸಿಕೊಡುತ್ತೇನೆ.

ಶ್ರೀ ಕೆ.ಎಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ ಡ್ರೈವರ್ಸ್ ಕೆಲವು ಸಂದರ್ಭಗಳಲ್ಲಿ ಕುಡಿದು ಡ್ರೈವ್ ಮಾಡುವುದರಿಂದ ಆಗತಕ್ಕಂಥ ಅಪಘಾತಗಳ ಬಗ್ಗೆ ಕೆಲವು ಸಂದರ್ಭಗಳಲ್ಲಿ ಕೇಸ್‌ನ್ನು ಹಾಕುತ್ತಾರೆ ಮತ್ತು ಕೆಲವು ಸಂದರ್ಭಗಳಲ್ಲಿ ಕೇಸ್ ಮಾಡುವುದೇ ಇಲ್ಲ. ಈ ರೀತಿ ಆಕ್ಸಿಡೆಂಟ್ ಮಾಡಿದಂಥ ವರಿಗೆ ಅವರ ಲೈಸೆನ್ಸ್‌ನ್ನು ರಿನ್ಯೂವ್ ಮಾಡದೆ ಇದ್ದರೆ ಮುಂದೆ ಆಗತಕ್ಕಂಥ ಆಕ್ಸಿಡೆಂಟ್‌ಗಳನ್ನು ತಪ್ಪಿಸಲು ಸಾಧ್ಯವಾಗಬಹುದು. ಆದ್ದರಿಂದ ಸರ್ಕಾರದವರು ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆಯೇ ಸ್ವಾಮಿ?

ಶ್ರೀ ಕೆ ಯೆಂಕಟಪ್ಪ.—ಆಕ್ಸಿಡೆಂಟ್ಸ್ ಆದಾಗ ಕೇಸ್ ಮಾಡುತ್ತಾರೆ. ಕೇಸ್‌ನ್ನು ಅನುಸರಿಸಿ ಕೋರ್ಟ್ ಯಾವರೀತಿ ತೀರ್ಮಾನವನ್ನು ಕೊಡುತ್ತಾರೋ ಆ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎಚ್. ಹನುಮೇಗೌಡ.—ಕೆಲವು ಸಂದರ್ಭಗಳಲ್ಲಿ ಕೇಸ್‌ನ್ನು ಹಾಕುತ್ತಾರೆ ಕೆಲವು ಸಂದರ್ಭದಲ್ಲಿ ಕೇಸ್ ಹಾಕುವುದೇ ಇಲ್ಲ. ಪದೇ ಪದೇ ಡ್ರೈವರ್‌ಗಳು ಲೈಸೆನ್ಸ್‌ನ್ನು ಪಡೆದು ಆಕ್ಸಿಡೆಂಟ್ಸ್ ಮಾಡುತ್ತಲೇ ಇರುತ್ತಾರೆ, ಇಂಥ ಸಂದರ್ಭದಲ್ಲಿ ಪೋಲೀಸ್‌ನವರು ಏನು ಕ್ರಮ ತೆಗೆದುಕೊಳ್ಳುತ್ತಾರೆ?

ಶ್ರೀ ಕೆ. ಯೆಂಕಟಪ್ಪ.—ಇಂಥ ಸಂದರ್ಭದಲ್ಲಿ ಲೈಸೆನ್ಸನ್ನು ಈ ರಾಜ್ಯದಲ್ಲಿ ರದ್ದು ಮಾಡಿದರೆ, ಬೇರೆ ರಾಜ್ಯದಲ್ಲಿ ಲೈಸೆನ್ಸ್‌ನ್ನು ಪಡೆದುಕೊಂಡು ಬರುತ್ತಾರೆ ಮತ್ತು ಅದಕ್ಕೆ ಅವಕಾಶವೂ ಇರುತ್ತದೆ.

ಶ್ರೀ ಎ ಲಕ್ಷ್ಮೀಸಾಗರ್.—ಮಾನ್ಯ ಸಚಿವರು ಬರೀ ಹಾರಿಕೆ ಉತ್ತರಗಳನ್ನು ಕೊಡುತ್ತಿರುತ್ತಾರೆ. ಆಗಬಹುದು, ಹೋಗಬಹುದು, ಮಾಡಬಹುದು ಎಂದು ಈ ರೀತಿ ಉತ್ತರಗಳನ್ನು ಕೊಡುತ್ತಿರುವು ದರಿಂದ ಯಾವವಿಧವಾದ ಅನುಕೂಲವು ಆಗುವುದಿಲ್ಲ. ಪ್ರಶ್ನೆಯನ್ನು ಕೇಳುವುದೇ ಬೇಕಾಗಿಲ್ಲವೆಂದು ತೋರುತ್ತಿದೆ. ಖಾತೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರವನ್ನು ಕೊಡುವುದಕ್ಕೆ ಸಭೆಯಲ್ಲಿ ಅವರು ಇಲ್ಲದೆಹೋದರೆ ಬೇರೆಯವರು ಉತ್ತರ ಹೇಳುವುದಕ್ಕೆ ಅಧಿಕಾರವಿದ್ದರೂ ಕೂಡ ಸಾಕಷ್ಟು ತರಬೇತಿ ಪಡೆದುಕೊಂಡು ಬರಬೇಕು. ವಿಷಯ ಗೊತ್ತಿಲ್ಲದಿದ್ದರೆ ಗೊತ್ತಿಲ್ಲವೆಂದು ಹೇಳಬೇಕು. ರಾತ್ರಿ ೧೦ ಗಂಟೆಯಾದಮೇಲೆ ವಾಹನಗಳನ್ನು ನಿಲ್ಲಿಸಬೇಕೆಂದು ಆಜ್ಞೆ ಇದ್ದರೂ ಕೂಡ ಕಾನೂನನ್ನು ಉಲ್ಲಂಘನೆ ಮಾಡಿ ವಾಹನಗಳನ್ನು ಚಲಿಸಿದ್ದರಿಂದ ಈ ವರ್ಷ ಎಷ್ಟು ಆಕ್ಸಿಡೆಂಟ್‌ಗಳು ಆಯಿತು ಎನ್ನುವ ಪ್ರಶ್ನೆಗೆ, ಈ ರೀತಿಯಾದ ಉತ್ತರ ಕೊಟ್ಟರೆ ಏನು ಮಾಡೋಣ?

ಶ್ರೀ ಕೆ. ಯೆಂಕಟಪ್ಪ.—ಮಾನ್ಯ ಸದಸ್ಯರಾದಂತಹ ಬೊಮ್ಮಾಯಿಯವರು ರಾತ್ರಿ ೧೦ ಗಂಟೆಯಾದ ಮೇಲೆ ವಾಹನಗಳನ್ನು ನಡೆಸಬಾರದು ಎಂದು ಆಜ್ಞೆ ಇದ್ದರೂ ವಾಹನಗಳು ಓಡಾಡುತ್ತಿರುತ್ತವೆ, ಓಡಾಡುವ ವಾಹನಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಾರೆ. ಆ ರೀತಿ ಓಡಾಡಬಾರದು, ಅದರ ಬಗ್ಗೆ ಆಜ್ಞೆ ಮಾಡಿದ್ದೇವೆಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀಮತಿ ಅನಸೂಯ ಗಜಾನನಶರ್ಮ.—ರಾತ್ರಿ ಓಡಾಡತಕ್ಕ ಬಸ್ಸುಗಳಲ್ಲಿ ಒಬ್ಬನೇ ಡ್ರೈವರ್ ಇರುತ್ತಾನೆ. ಆತ ೮ ಗಂಟೆ ಕೆಲಸ ಮಾಡಬೇಕು. ಆದರೂ ಆತ ೧೫-೧೬ ತಾಸು ಬಸ್ಸುಗಳನ್ನು ಓಡಿಸುತ್ತಾನೆ. ಇವತ್ತು ಡ್ರೈವ್ ಮಾಡಿಕೊಂಡು ಹೋದ ಡ್ರೈವರ್ ಪುನಃ ನಾಳೆ ಆತನೇ ಬರಬೇಕು ಇದು ಸರ್ಕಾರದ ಗಮನಕ್ಕೆ ಬಂದಿದೆಯೆ?.

ಶ್ರೀ ಕೆ. ಯೆಂಕಟಪ್ಪ.—ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಬಿ ಎಚ್. ಲಕ್ಷ್ಮಣಯ್ಯ.—ವಾಹನಗಳಿಗೆ ಅಪಘಾತವಾದಾಗ ಪೋಲೀಸ್ ಸ್ಟೇಶನ್‌ನ ಹತ್ತಿರ ನಿಲ್ಲಿಸುತ್ತಾರೆ. ಬ್ರೇಕ್ ಇನ್ಸ್‌ಪೆಕ್ಟರ್ ಬಂದು ವಾಹನವನ್ನು ನೋಡಬೇಕು. ಬ್ರೇಕ್ ಇನ್ಸ್‌ಪೆಕ್ಟರ್

ಜಿಲ್ಲಾ ಹೆಡ್‌ಕ್ವಾರ್ಟರ್‌ನಲ್ಲಿರುತ್ತಾನೆ ಆತ ಬರುವುದಕ್ಕೆ ಒಂದೆರಡು ದಿವಸಗಳಾಗುತ್ತವೆ. ಆಮೇಲೆ ಅಪಘಾತವಾದ ವಾಹನವನ್ನು ರಿಲೀಸ್ ಮಾಡುತ್ತಾರೆ. ಅದಕ್ಕೆ ಬದಲಾಗಿ ಬೇರೆ ವ್ಯವಸ್ಥೆ ಮಾಡಬೇಕು. ಹೆಂಗಸರು ಮಕ್ಕಳು ಇದ್ದರೆ ಎರಡು-ಮೂರು ದಿವಸ ಕಾಯ್ದು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ಪೋಲೀಸ್ ಸ್ಟೇಷನ್‌ನಲ್ಲಿರತಕ್ಕ ಸಬ್‌ಇನ್ಸ್‌ಪೆಕ್ಟರ್‌ಗೆ ಟ್ರೈನಿಂಗ್ ಕೊಡುವ ಕಾಲಕ್ಕೆ ಅಪಘಾತ ಯಾವರೀತಿಯಾಗುತ್ತದೆ ಎನ್ನುವುದನ್ನು ಹೇಳಿಕೊಡುವುದಕ್ಕೆ ಏತಕ್ಕೆ ಅವಕಾಶ ಮಾಡಿಕೊಡಬಾರದು?.

ಶ್ರೀ ಕೆ. ಯೆಂಕಟಪ್ಪ.—ಮಾನ್ಯ ಸದಸ್ಯರ ಅಭಿಪ್ರಾಯ ಸರಿ ಇರಬಹುದು, ಆ ರೀತಿ ಮಾಡುವುದಕ್ಕಾಗುವುದಿಲ್ಲ ಏಕೆಂದರೆ, ಆರ್.ಟಿ.ಒ. ಇದಕ್ಕೆ ಸಂಬಂಧಪಟ್ಟ ತರಬೇತಿಯನ್ನು ಪಡೆದಿರಂತ್ತಾರೆ. ಪೋಲೀಸ್ ಸಬ್‌ಇನ್‌ಪೆಕ್ಟರ್‌ರವರಿಗೆ ಕೊಡುವ ತರಬೇತಿ ಬೇರೆ ಅದನ್ನು ಮಾಡುವುದಕ್ಕಾಗುವುದಿಲ್ಲ.

SRI PRABHAKAR TELKAR.—There are long routes of more than 600 or 700 KMs where these KSRTC buses are plying. But there is only one driver who has to cover more than 400 KMs. Will the KSRTC think of keeping two drivers in the same bus so that it can be driven alternatiely by two drivers in order to safeguard the life of the passengers?

ಶ್ರೀ ಕೆ. ಯೆಂಕಟಪ್ಪ.—ಈ ಸಲಹೆಯನ್ನು ಪರಿಶೀಲಿಸಲಾಗುವುದು.

Distribution of House Sites under 20 Point Programme

657 SRI M. S. ATMANANDA (Mandya)—Will the Minister for Housing and Urban Devolopment be pleased to state.—

(a) the number of villages to which house sites have been allotted for the last three years in Mandya taluk under the 20 points Economic programme;

(b) the names of villages to which housing facility has been provided;

(c) the extent of land acquired as per this scheme;

(d) the amount of compensation paid by the Government to the lands acquired?

SRI DHARMA SINGH (Minister for Housing and Urban Development)

(a) 2676 sites have been allotted in 44 villages of Mandya taluk during the last 5 years.

(b) Villages;

1. Channakkanna Doddi.
2. Hunalaganahalli.
3. T. Malligere.
4. Sodekipplu.
5. Kottatti.